ಕೋಳಿವಾಡ, ಇಂಗಳಳ್ಳಿ, ಮಲ್ಲಿಗವಾಡ, ಉಮಚಗಿ ಮತ್ತು ಬಂಡಿವಾಡ ಗ್ರಾಮಗಳಲ್ಲಿ ಸಮೀಕ್ಷೆ ವಿಳಂಬವಾಗಿದ್ದು ಪ್ರಸ್ತುತ ಸಮೀಕ್ಷೆ ಪ್ರಗತಿಯಲ್ಲಿದ್ದು ಒಂದು ವಾರದಲ್ಲಿ ಜಂಟಿ ಸಮೀಕ್ಷೆಯನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಸಮೀಕ್ಷೆ ಬಂದ ನಂತರ ಅರ್ಹ ರೈತರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು.

ಕಳಸಾ ಬಂಡೂರಿ ನಾಲಾ ಜೋಡಣೆಯ ಕಾಮಗಾರಿ

926 (1546); ಶ್ರೀ ಕೋನರೆಡ್ಡಿ ಎನ್.ಎಚ್. (ನವಲಗುಂದ)

ಅ) ಉತ್ತರ ಕರ್ನಾಟಕದ ಪ್ರಮುಖ ಬೇಡಿಕೆಯಾದ ಕಳಸಾ ಬಂಡೂರಿ ನಾಲಾ ಜೋಡಣೆ ಪ್ರಸ್ತುತ ಯಾವ ಹಂತದಲ್ಲಿದೆ; ಸದರಿ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು?

ಆ) 2014–15ನೇ ಸಾಲಿನಲ್ಲಿ ಈ ಯೋಜನೆ ಜಾರಿಗೊಳಿಸಲು ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು; ಈ ಯೋಜನೆಗೆ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು;

ಇ) ಈ ಯೋಜನೆಯಿಂದ ಹುಬ್ಬಳ್ಳಿ–ಧಾರವಾಡ ಸೇರಿದಂತೆ ಎಷ್ಟು ಜಿಲ್ಲೆಯ ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಹಾಗೂ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರು ಪೂರೈಸಲು ತೀರ್ಮಾನಿಸಲಾಗಿದೆ;

ಈ) ಈ ಯೋಜನೆ ಜಾರಿಗೊಳಿಸಲು ಅಚ್ಚುಕಟ್ಟು ಪ್ರದೇಶದ ಜನ ಪ್ರತಿನಿಧಿಗಳ ಹಾಗೂ ವಿವಿಧ ಸಂಘಟನೆಗಳ ಸಭೆ ಕರೆಯಲಾಗಿದೆಯೇ; ಈ ಯೋಜನೆ ಜಾರಿಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ

ಸರ್ವ ಪಕ್ಷದ ನಿಯೋಗ ತೆಗೆದುಕೊಂಡು ಹೋಗಲು ಸರ್ಕಾರ ಪ್ರಯತ್ನಿಸಿದೆಯೇ?

ಊ) ಮಲಪ್ರಭಾ ಬಲದಂಡೆ ಮುಖ್ಯ ಕಾಲುವೆ, ಉಪ ಕಾಲುವೆ, ಎಫ್.ಸಿ., ಕಾಲುವೆಗಳ ಹತ್ತಿರವಿರುವ ಎಸ್.ಆರ್. ಅಭಿವೃದ್ಧಿ ಮತ್ತು ಅಚ್ಚುಕಟ್ಟು ಪ್ರದೇಶದ ರೈತರ ಹೊಲಗಳಿಗೆ ಹೋಗಿ ಬರಲು ರಸ್ತೆ ನಿರ್ಮಾಣಕ್ಕೆ ಪ್ರಸಕ್ತ ವರ್ಷದಲ್ಲಿ ಸರ್ಕಾರ 1000 ಕೋಟಿ ರೂ. ಅನುದಾನ ಬಿಡುಗಡೆ?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) • ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನಲ್ಲಿ ಉಗಮಿಸಿ ಪಶ್ಚಿಮಾಭಿಮುಖವಾಗಿ ಹರಿದು ಗೋವಾ ರಾಜ್ಯದ ಮುಖಾಂತರ ಅರಬ್ಬಿ ಸಮುದ್ರ ಸೇರುವ ಮಹದಾಯಿ ನದಿಯ ಹಾಗೂ ಕರ್ನಾಟಕದಲ್ಲಿಯೇ ಹರಿಯುವ ಉಪ ನದಿಗಳಾದ ಕಳಸಾ ಹಾಗೂ ಭಂಡೂರ ಹಳ್ಳಗಳಲ್ಲಿ ಹರಿಯುವ 7.56 ಟಿ.ಎಂ.ಸಿ. ನೀರನ್ನು ಮಲಪ್ರಭಾ ನದಿಗೆ ಜೋಡಿಸುವ ಯೋಜನೆಗಳನ್ನು ರೂಪಿಸಲಾಗಿದೆ.

• ಕಳಸಾ ಹಾಗೂ ಬಂಡೂರ ನಾಲಾ ತಿರುವು ಯೋಜನೆಗಳಿಗೆ ಕರ್ನಾಟಕ ಸರ್ಕಾರವು ಕ್ರಮವಾಗಿ ₹ 44.78 ಕೋಟಿಗಳಿಗೆ ಹಾಗೂ ₹ 49.20 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು 2000ನೇ ಸಾಲಿನಲ್ಲಿ ನೀಡಿದೆ.

• ಕಳಸಾ ಹಾಗೂ ಬಂಡೂರ ನಾಲಾ ತಿರುವು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಜಲ ಆಯೋಗವು ದಿನಾಂಕ 30.04.2002 ರಲ್ಲಿ ಕೆಲವು ಷರತ್ತುಗಳೊಂದಿಗೆ "ತತ್ವಾಧಾರಿತ ತೀರುವಳಿ" ಯನ್ನು ನೀಡಿರುತ್ತದೆ, ಆದರೆ ಗೋವಾ ಸರ್ಕಾರದ ಆಕ್ಷೇಪಣೆ ಹಿನ್ನಲೆಯಲ್ಲಿ ಈ ಮೊದಲು ನೀಡಿದ್ದ "ತತ್ವಾಧಾರಿತ ತೀರುವಳಿ"

ಗೆ ಕೇಂದ್ರ ಸರ್ಕಾರವು ದಿನಾಂಕ: 19.09.2002 ರಂದು ತಡೆಯಾಜ್ಞೆಯನ್ನು ನೀಡಿದೆ.

- ಕರ್ನಾಟಕ ಸರಕಾರವು ತನ್ನ ಪಾಲಿನ ನೀರನ್ನು ಉಪಯೋಗಿಸಲು ಕಳಸಾ ನಾಲ ತಿರುವು ಯೋಜನೆಯಲ್ಲಿ ಬರುವ ಕಳಸಾ ನಾಲಾ ಕೂಡು ಕಾಲುವೆ ನಿರ್ಮಾಣದ ಕೆಲಸವನ್ನು ದಿನಾಂಕ: 09.10.2006 ರಲ್ಲಿ ಸರ್ಕಾರದ ಆದೇಶದಂತೆ ಅರಣ್ಯೇತರ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಕಳಸಾ ಜಲಾಶಯದಿಂದ ಮಲಪ್ರಭಾ ನದಿಗೆ ಜೋಡಿಸುವ ಕೂಡು ಕಾಲುವೆಯ ಒಟ್ಟು ಉದ್ದ 5.15 ಕಿ.ಮೀ. ಇದ್ದು, ಅದರಲ್ಲಿ ಈಗಾಗಲೇ 4.75 ಕಿ.ಮೀ. ಉದ್ದದ ಕಟ್ & ಕವರ್ ಆರ್.ಸಿ.ಸಿ. ಬಾಕ್ಸ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಹಾಗೂ ಬಾಕಿ ಉಳಿದ ಕಾಮಗಾರಿಯು ಪ್ರಗತಿಯಲ್ಲಿರುವುದು. ಮೇ 2015ರ ವರೆಗೆ ಟೆಂಡರ್ ಕಾಲಾವಧಿ ಇದ್ದು ಬಾಕಿ ಉಳಿದ 400 ಮೀ (0.40 ಕಿ.ಮೀ.) ಕೆಲಸವನ್ನು ಪೂರ್ಣಗೊಳಿಸಲಾಗುವುದು.

- ಈ ಯೋಜನೆಯ ಅರಣ್ಯೇತರ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ಕೂಡು ಕಾಲುವೆ ಕೆಲಸವನ್ನು 2015ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಹಾಗೂ ಅಣೆಕಟ್ಟು ಮತ್ತು ಉಳಿದ ಕಾಮಗಾರಿಗಳ ನಿರ್ಮಾಣದ ಸ್ಥಳವು ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಬರುವುದರಿಂದ ಕೇಂದ್ರ ಸರ್ಕಾರದ ಕೇಂದ್ರ ಜಲ ಆಯೋಗದ MoEF ಹಾಗೂ ಕೇಂದ್ರ ಪರಿಸರ, ಮತ್ತು ಅರಣ್ಯ ಮಂತ್ರಾಲಯದ ಅನುಮೋದನೆ ಹಾಗೂ ಮಹಾದಾಯಿ ಜಲ ವಿವಾದದ ನ್ಯಾಯಾಧಿಕರಣದ ತೀರ್ಪು ಬಂದ ನಂತರ ಪೂರ್ಣ ಪ್ರಮಾಣದಲ್ಲಿ ಅಣೆಕಟ್ಟಿನ ಹಾಗೂ ಇತರ ಎಲ್ಲ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) 2014–15ನೇ ಸಾಲಿನಲ್ಲಿ ಈ ಯೋಜನೆ ಜಾರಿಗೊಳಿಸಲು ₹ 2399.50 ಲಕ್ಷಗಳ ಅನುದಾನ ನೀಡಲಾಗಿದ್ದು, ಈ ಯೋಜನೆಗೆ ಇಲ್ಲಿಯವರೆಗೆ ಸಂಚಿತ ₹ 194.84 ಕೋಟಿ ಖರ್ಚು ಮಾಡಲಾಗಿದೆ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಂದ ಹುಬ್ಬಳ್ಳಿ–ಧಾರವಾಡ ನಗರ, ಪಟ್ಟಣ ಹಾಗೂ ಮಾರ್ಗ ಮಧ್ಯದ ಹಳ್ಳಿಗಳಿಗೆ ಕುಡಿಯುವ ನೀರಿನ ವರದಿಯನ್ನು ಕರ್ನಾಟಕ ರಾಜ್ಯದ ಪರವಾಗಿ ಮಹಾದಾಯಿ ಜಲವಿವಾದ ನ್ಯಾಯಾಧಿಕರಣದ ಮುಂದೆ ದಿನಾಂಕ 02.01.2013 ರಲ್ಲಿ ದಾಖಲಿಸಿದೆ.

ಈ ವರದಿಯ ಪ್ರಕಾರ ಈ ಕೆಳಕಂಡ ನಗರ, ಪಟ್ಟಣ ಮತ್ತು ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಸಲಾಗುವುದು.

1.	ಹುಬ್ಬಳ್ಳಿ–ಧಾರವಾಡ ನಗರ	ಅವಳಿ ನಗರಗಳು	ಧಾರವಾಡ ಜಿಲ್ಲೆ
2.	ಕುಂದಗೋಳ ಪಟ್ಟಣ	ಕುಂದಗೋಳ ತಾಲ್ಲೂಕು	
3.	ಅಮ್ಮಿನಭಾವಿ	ಧಾರವಾಡ ತಾಲ್ಲೂಕು	
4.	ಚಂದನಮಟ್ಟಿ	ಧಾರವಾಡ ತಾಲ್ಲೂಕು	
5.	ಕೌಲಗೇರಿ	ಧಾರವಾಡ ತಾಲ್ಲೂಕು	
6.	ಕಂಕೂರ	ಧಾರವಾಡ ತಾಲ್ಲೂಕು	
7.	ತಲವಾಯಿ	ಧಾರವಾಡ ತಾಲ್ಲೂಕು	
8.	ವನಹಳ್ಳಿ	ಧಾರವಾಡ ತಾಲ್ಲೂಕು	
9.	ಹೆಬ್ಬಳ್ಳಿ	ಧಾರವಾಡ ತಾಲ್ಲೂಕು	
10.	ಮರದಗಿ	ಧಾರವಾಡ ತಾಲ್ಲೂಕು	
11.	ಸೋಮಾಪುರ	ಧಾರವಾಡ ತಾಲ್ಲೂಕು	
12.	ಶಿವಳ್ಳಿ	ಧಾರವಾಡ ತಾಲ್ಲೂಕು	
13.	ಕಬ್ಬೇನೂರ	ಧಾರವಾಡ ತಾಲ್ಲೂಕು	
14.	ಹಾರೂಬೆಳವಡಿ	ಧಾರವಾಡ ತಾಲ್ಲೂಕು	
15.	ಶಿರೂರ	ನವಲಗುಂದ ತಾಲ್ಲೂಕು	

16.	ಐಯಟ್ಟಿ	ನವಲಗುಂದ ತಾಲ್ಲೂಕು	
17.	ಉಪ್ಪಿನ ಬೆಟಗೇರಿ	ಧಾರವಾಡ ತಾಲ್ಲೂಕು	
18.	ಕರಡಿಗುಡ್ಡ	ಧಾರವಾಡ ತಾಲ್ಲೂಕು	
19.	ಉದಕಲಕಟ್ಟಿ	ಧಾರವಾಡ ತಾಲ್ಲೂಕು	
20.	ತಿಮ್ಮಾಪುರ	ಧಾರವಾಡ ತಾಲ್ಲೂಕು	
21.	ಬೆಟಸೂರು	ಸವದತ್ತಿ ತಾಲ್ಲೂಕು	ಬೆಳಗಾವಿ ಜಿಲ್ಲೆ
22.	ಎಡ್ರಾವಿ	ಸವದತ್ತಿ ತಾಲ್ಲೂಕು	
23.	ಇನಾಮಹೊಂಗಲ	ಸವದತ್ತಿ ತಾಲ್ಲೂಕು	
24.	ಚಿಕ್ಕ ಹುಲ್ಲಿಗೇರಿ	ಸವದತ್ತಿ ತಾಲ್ಲೂಕು	
25.	ಹಿರೇ ಹುಲ್ಲಿಗೇರಿ	ಸವದತ್ತಿ ತಾಲ್ಲೂಕು	
26.	ಸಂಗ್ರೇಶ ಕೊಪ್ಪ	ಸವದತ್ತಿ ತಾಲ್ಲೂಕು	
27.	ಯಡಿಹಳ್ಳಿ	ಸವದತ್ತಿ ತಾಲ್ಲೂಕು	

ಈ) ಈ ಯೋಜನೆ ಜಾರಿಗೊಳಿಸುವ ಸಂಬಂಧವಾಗಿ ಮಾನ್ಯ ಜಲ ಸಂಪನ್ಮೂಲ ಸಚಿವರು ದಿನಾಂಕ: 13.11.2013 ರಂದು ಧಾರವಾಡದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಚ್ಚುಕಟ್ಟು ಪ್ರದೇಶದ ಶಾಸಕರು ಹಾಗೂ ಕಳಸಾ ಬಂಡೂರಿ ಹೋರಾಟ ಸಮಿತಿಯ ವಿವಿಧ ಸಂಘಟನೆಗಳ ಸಭೆ ಕರೆದು ರಾಜ್ಯ ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ವಿವರ ನೀಡಿರುವರು. ಈ ಸಭೆಯಲ್ಲಿ ವಕೀಲರು ಭಾಗವಹಿಸಿ ಮಾಹಿತಿ ನೀಡಿದರು. ಈ ಸಭೆಯಲ್ಲಿ ಸರ್ವಪಕ್ಷದ ನಿಯೋಗ ತೆಗೆದುಕೊಡು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಬಗ್ಗೆಯೂ ಸಹ ಚರ್ಚಿಸಲಾಯಿತು. ಮತ್ತು ವಿವಿಧ ಸಂಘಟನೆಗಳ ಅಭಿಪ್ರಾಯವನ್ನು ಸಹ ಪಡೆಯಲಾಯಿತು.

ಉ) ಸರ್ಕಾರದಲ್ಲಿ ಈ ರೀತಿಯ ಪ್ರಸ್ತಾವನೆಗಳು ಇರುವುದಿಲ್ಲ.